**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.536/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಹೇಮರಾಜ್ ಜೈನ್ | ಪ್ರಾಸಾ-3 |
| ತಂದೆಯ ಹೆಸರು | : ಲೇಟ್ ಸೋಹನ್ ರಾಜ್ | ಚಾಸಾ-4 |
| ವಯಸ್ಸು | : 54 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ 01.07.2025 |
| ವಾಸಸ್ಥಳ | : ಮೂಡಿಗೆರೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಆರೋಪಿಯ ಪರಿಚಯ ನನಗಿಲ್ಲ. ಚಾಸಾ-3 ರವರ ಪರಿಚಯ ನನಗಿದೆ.

ದಿ.19.02.2024 ರಂದು ಚಾಸಾ-3 ರವರು ನಮ್ಮ ಅಂಗಡಿಯಲ್ಲಿ 15 ಗ್ರಾಂ 850 ಮಿಲಿ ತೂಕದ ಒಂದು ಚಿನ್ನದ ಸರವನ್ನು ಅಡವಿಟ್ಟು ನನ್ನಿಂದ ರೂ.51,000/- ಗಳನ್ನು ಪಡೆದುಕೊಂಡಿರುತ್ತಾರೆ. ಮರು ದಿನ ಪೋಲಿಸರು ಚಾಸಾ-3 ಮತ್ತು ಇನ್ನೊಬ್ಬನನ್ನು ನಮ್ಮ ಅಂಗಡಿಗೆ ಬಂದು ಅಡವಿಟ್ಟ ಚಿನ್ನದ ಸರವನ್ನು ಹಿಂಪಡೆದುಕೊಂಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ಯಾವುದೇ ವಿಷಯ ನನಗೆ ತಿಳಿದಿರುವುದಿಲ್ಲ.

ಸಾಕ್ಷಿಯು ಅಮಾನತು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-10 ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ದಿ.26.06.2024 ರಂದು ನೀಡಿದಂತಹ ಕಲಂ 100(7) ರ ಅಡಿಯಲ್ಲಿ ನೀಡಿದಂತ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11 ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೋಗಳಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿದ್ದು, ಅದನ್ನು ನಿಪಿ-12 ಮತ್ತು 13 ಎಂದು ಗುರುತಿಸಲಾಯಿತು. ದಿ.19.12.2024 ರಂದು ನವರತ್ನ ಫೈನಾನ್ಸ್ ರವರು ನೀಡಿದ ರಶೀದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.19.02.2024 ರಂದು ಚಾಸಾ-3 ರವರೊಟ್ಟಿಗೆ ಆರೋಪಿಯನ್ನು ನಮ್ಮ ಫೈನಾನ್ಸ್ ಅಂಗಡಿಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ. ಚಾಸಾ-3 ರವರು ಚಿನ್ನದ ಸರವನ್ನು ಅಡವಿಟ್ಟು ರೂ.75,000/- ಹಣ ಕೊಡುವಂತೆ ಕೇಳಿದ್ದು ನಾನು ಆ ಸರಕ್ಕೆ ಅಷ್ಟು ಹಣ ಕೊಡಲು

ಸಾಧ್ಯವಾಗುವುದಿಲ್ಲ ಎಂದು ಕೇವಲ 51,000/- ರೂಗಳನ್ನು ನೀಡಿರುತ್ತೇನೆ ಎಂದರೆ ಸರಿ. ನನ್ನ ಅಂಗಡಿಯಲ್ಲಿ ಚಾಸಾ-3 ರವರು ಅಡವಿಟ್ಟಂತಹ ಸರವನ್ನು ಚಾಸಾ-1 ರವರ ಮನೆಯಲ್ಲಿ ಕಳವು ಮಾಡಲಾಗಿರುತ್ತದೆ ಎಂದು ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿ. ದಿ.26.02.2024 ರಂದು ಬಣಕಲ್ ಪೋಲಿಸ್ ಠಾಣೆಯ ಪಿ.ಎಸ್.ಐ ರವರು ಆರೋಪಿಯೊಂದಿಗೆ ನಮ್ಮ ಅಂಗಡಿಗೆ ಬಂದು ಚಿನ್ನದ ಸರವನ್ನು ಅಮಾನತುಪಡಿಸಿಕೊಳ್ಳುವ ಕಾಲಕ್ಕೆ ಬರೆಯಲಾದ ನಿಪಿ-10 ಮತ್ತು 11 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸಮಯಕ್ಕೆ ನಿಪಿ-12 ಮತ್ತು 13 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ನಿಪಿ-14 ನ್ನು ನಮ್ಮ ಅಂಗಡಿಯಿಂದ ಬಿಲ್ ನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸರವನ್ನು ಪುನಃ ನೋಡಿದರೆ ನಾನು ಗುರುತಿಸಬಲ್ಲೆ. ನಾನು ಆರೋಪಿಯನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್ ವಕೀಲರಿಂದಃ**

ಚಿನ್ನದ ಸರವನ್ನು ಗಿರವಿ ಇಡುವ ಕಾಲಕ್ಕೆ ಚಾಸಾ-3 ರವರು ಮಾತ್ರ ಬಂದಿರುತ್ತಾರೆ. ನಿಪಿ-14 ನ್ನು ಚಾಸಾ-3 ರವರ ಹೆಸರಿನಲ್ಲಿಯೇ ನೀಡಿರುತ್ತೇನೆ ಎಂದರೆ ಸರಿ. ಆರೋಪಿಯು ಪೋಲಿಸರ ಮುಖಾಂತರ ಪರಿಚಯವಾಗಿರುತ್ತಾರೆ. ಪೋಲಿಸರು ಆರೋಪಿಯನ್ನು ನಮ್ಮ ಅಂಗಡಿಗೆ ಕರೆದುಕೊಂಡು ಬರುವ ಪೂರ್ವದಲ್ಲಿ ನಾನು ಅವರನ್ನು ನೋಡಿರುವುದಿಲ್ಲ. ಚಾಸಾ-1 ರವರ ಮನೆಯಿಂದ ಯಾರು ಕಳ್ಳತನ ಮಾಡಿರುತ್ತಾರೆ ಎಂಬ ಮಾಹಿತಿ ನನಗಿರುವುದಿಲ್ಲ. ಪೋಲಿಸರು ಹೇಳಿದ ಮೇರೆಗೆ ತಿಳಿದಿರುತ್ತದೆ. ದಿ.26.02.2024 ರಂದು ನಿಪಿ-10 ನ್ನು ಬರೆಯಲಾಗಿರುತ್ತದೆ. ಸಮಯ ನನಗೆ ನೆನಪಿರುವುದಿಲ್ಲ. ನಿಪಿ-12 ಮತ್ತು 13 ನ್ನು ಯಾರು ತೆಗೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಪಿ-10 ರಲ್ಲಿ ಯಾವ ಅಂಶಗಳನ್ನು ನಮೂದಿಸಲಾಗಿರುತ್ತದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.536/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸುಂದರ್ | ಪ್ರಾಸಾ-4 |
| ತಂದೆಯ ಹೆಸರು | : ನಾರಾಯಣ | ಚಾಸಾ-5 |
| ವಯಸ್ಸು | : 45 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 01.07.2025 |
| ವಾಸಸ್ಥಳ | : ಬಾನಳ್ಳಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಚಾಸಾ-1, 2 ಮತ್ತು 6 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ.

ನಾನು 8 ತಿಂಗಳ ಹಿಂದೆ ಚಾಸಾ-2 ರವರ ಮನೆಯ ಬಳಿ ನಿಪಿ-2 ಕ್ಕೆ ಸಹಿಯನ್ನು ಮಾಡಿರುತ್ತೇನೆ. ಯಾವ ವಿಚಾರಕ್ಕೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ನಾನು ಸಹಿಯನ್ನು ಮಾಡಿರುತ್ತೇನೆ. ನಿಪಿ-2 ರಲ್ಲಿ ಏನನ್ನು ಬರೆದಿರುತ್ತಾರೆ ಎಂದು ಓದಿ ತಿಳಿದುಕೊಂಡಿಲ್ಲ ಹಾಗೆಯೇ ಪೋಲಿಸರು ನನಗೆ ಓದಿ ತಿಳಿಸಿರುವುದಿಲ್ಲ. ನಿಪಿ-2 ನ್ನು ಚಾಸಾ-2 ರವರ ಮನೆಯ ಬಳಿಯೇ ತೆಗೆಯಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.26.02.2024 ರಂದು ಮ.2.00 ರಿಂದ 3.00 ರ ಸಮಯದಲ್ಲಿ ಚಾಸಾ-1 ರವರ ಮನೆಯ ಬಳಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಚಾಸಾ-1 ರವರ ಮನೆಯಲ್ಲಿ ಆಭರಣಗಳು ಕಳುವಾದ ಹಿನ್ನಲೆಯಲ್ಲಿ ಮಹಜರ್ ಕ್ರಮ ಜರುಗಿಸಿದ್ದು ಅದಕ್ಕೆ ಕುರಿತಂತೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾಸಾ-6 ರವರು ಸಹಿ ಮಾಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನಗೆ ಎಲ್ಲಾ ವಿಚಾರ ತಿಳಿದಿದ್ದು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.